3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ
ನ್ಯಾಯಾಲಯ, ಕಡೂರು.

**<u>ಸಿ.ಸಿ.ನಂ.779/2022</u>**

<u>ಪಿರ್ಯಾದುದಾರರು</u> ಃ ಸರ್ಕಾರದ ಪರವಾಗಿ ಬೀರೂರು ಪೊಲೀಸರಿಂದ

-ವಿರುದ್ಧ-

<u>ಆರೋಪಿತರು</u> ಃ ತಮ್ಮಯ್ಯ ಮತ್ತು ಇತರರು

<u>-ಃ ದೋಷಾರೋಪಣೆಃ-</u>

ಶ್ರೀಮತಿ ಸವಿತರಾಣಿ ಹೆಚ್.ವಿ., ಬಿ.ಎ.ಎಲ್. ಎಲ್‌ಎಲ್.ಬಿ., 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವಃ

1. ತಮ್ಮಯ್ಯ ಬಿನ್ ಕೃಷ್ಣಪ್ಪ, 38 ವರ್ಷ,
2. ರವಿ ಬಿನ್ ಕೃಷ್ಣಪ್ಪ, 40 ವರ್ಷ,
3. ಚೈತ್ರ ಕೋಂ ತಮ್ಮಯ್ಯ 28 ವರ್ಷ,
4. ಅನಿತಾ ಕೋಂ ರವಿ, 30 ವರ್ಷ,

ಎಲ್ಲರೂ ವ್ಯವಸಾಯಗಾರರು, ವಾಸ ಗಾಳಿಹಳ್ಳಿ ಗ್ರಾಮ,
ಬೀರೂರು ಹೋಬಳಿ, ಕಡೂರು ತಾಲ್ಲೂಕು.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಮಾಡುವುದೇನೆಂದರೆಃ

ದಿನಾಂಕ 02.08.2021 ರಂದು ಸಂಜೆ 4-30 ರ ಸಮಯದಲ್ಲಿ ಬೀರೂರು ಠಾಣಾ ವ್ಯಾಪ್ತಿಯ ಗಾಳಿಹಳ್ಳಿ ಗ್ರಾಮದ ಬೆನಪ್ಪರ ಗಿರಿಯಪ್ಪ ರವರ ಸರ್ವೆ ನಂಬರ್ 51/1-2 ರ ಜಮೀನಿನಲ್ಲಿ ಸಂಜೆ 5-00 ಗಂಟೆ ಸಮಯದಲ್ಲಿ, 1 ರಿಂದ 4 ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ, ಚಾಸಾ-1 ರವರಿಗೆ 1 ನೇ ಆರೋಪಿಯಾದ ನೀವು ನಮ್ಮ ಹೊಲದಲ್ಲಿ ಎಮ್ಮೆ ಮತ್ತು ಮೇಕೆಗಳನ್ನು ಇಲ್ಲಿ ಏಕೆ ಮೇಯಿಸುತ್ತಿದ್ದೀಯಾ ಎಂದು ಕೇಳಿದಾಗ, ಚಾಸಾ-1 ರವರು ಯಾರು ನಿನಗೆ ಹೇಳಿದ್ದು ಎಂದು ಕೇಳಿದ್ದಕ್ಕೆ 1 ನೇ ಆರೋಪಿಯಾದ ನೀವು ನಿನಗೇಕೆ ಹೇಳಬೇಕು ಹಾದರಗಿತ್ತಿ, ಸೂಳೆಮುಂಡೆ ಎಂದು ಬೈದಿದ್ದಲ್ಲದೇ ನಿಮ್ಮಗಳ ಪೈಕಿ 2 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ಏನೇ ಲೌಡಿ ಎಂದು ಬೈದು ಹಾಗೂ 3 ನೇ ಆರೋಪಿಯಾದ ನೀವು ಸಹ ಎನಡಿಗಿ, ನನ್ನ ಗಂಡನಿಗೆ ತಿರುಗಿ ಮಾತನಾಡುತ್ತೀಯಾ ಸೂಳೆಮುಂಡೆ ಎಂದು ಬೈದಿದ್ದು, ಅವಾಚ್ಯ

ಶಬ್ದಗಳಿಂದ ಬೈದು, ಸಾರ್ವಜನಿಕ ನೆಮ್ಮದಿಗೆ ಶಾಂತಿಭಂಗವನ್ನುಂಟು ಮಾಡಿ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ 504 ಸಹ ಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ 1 ರಿಂದ 4 ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಜಗಳ ತೆಗೆದು, ನಿಮ್ಮಗಳ ಪೈಕಿ 1 ನೇ ಆರೋಪಿಯಾದ ನೀವು ಚಾಸಾ-1 ರವರೊಂದಿಗೆ ಜಗಳ ತೆಗೆದು, ಏಕಾಏಕಿ ಎದೆಗೆ ಕೈ ಹಾಕಿ ಎಳೆದಾಡಿದ್ದು, 2 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ಕೈಯನ್ನು ಹಿಡಿದು ಎಳೆದಾಡಿದ್ದು ಅವರ ಮಾನಕ್ಕೆ ಕುಂದುಂಟಾಗುವಂತೆ ವರ್ತಿಸಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ 354 ಸಹ ಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೇಯದಾಗಿ ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, 1 ರಿಂದ 4 ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಜಗಳ ತೆಗೆದು, 3 ನೇ ಆರೋಪಿಯಾದ ನೀವು ಚಾಸಾ-1 ರವರ ತಲೆ ಕೂದಲು ಹಿಡಿದುಕೊಂಡು ಬಗ್ಗಿಸಿಕೊಂಡಿದ್ದು ಹಿಂದೆಯೇ ಬಂದಿದ್ದ 1 ಮತ್ತು 2 ನೇ ಆರೋಪಿತರಾದ ನೀವು ಕಾಲುಗಳಿಂದ ಮೈಕೈಗೆ ಹೊಡೆದಿದ್ದು ಹಾಗೂ ಅಲ್ಲೇ ಇದ್ದ 4 ನೇ ಆರೋಪಿಯಾದ ನೀವು ಕೈಯಿಂದ ಮೈಕೈಗೆ ಹೊಡೆದಿದ್ದು, ಸೊಂಟಕ್ಕೆ ಮತ್ತು ಹೊಟ್ಟೆಗೆ ಕೈಯಿಂದ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದೀರಿ. ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ 323 ಸಹ ಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ನಾಲ್ಕನೇಯದಾಗಿಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, 1 ರಿಂದ 4 ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಜಗಳ ಬಿಡಿಸಲು ಬಂದ ಚಾಸಾ-2 ರವರಿಗೆ 1 ನೇ ಆರೋಪಿಯಾದ ನೀವು ಮಚ್ಚಿನಿಂದ ಚಾಸಾ-2 ರವರಿಗೆ ಮೂಗಿನ ಬಳಿ ಹೊಡೆದಿದ್ದಲ್ಲದೇ ನಿಮ್ಮಗಳ ಪೈಕಿ 2 ನೇ ಆರೋಪಿಯಾದ ನೀವು ದೊಣ್ಣೆಯಿಂದ

ಹೊಟ್ಟೆಗೆ ಕಾಲಿಗೆ ಹೊಡೆದು ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ 324 ಸಹ ಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ 1 ರಿಂದ 4 ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಜಗಳ ತೆಗೆದು, ಚಾಸಾ-1 ಮತ್ತು 2 ರವರಿಗೆ ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿ ಅಪರಾಧಿಕಾ ಭಯೋತ್ಪಾಧನೆಯನ್ನುಂಟು ಮಾಡಿರುತ್ತೀರಿ. ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ 506 ಸಹ ಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ಸಹಿ/-
**(ಸವಿತರಾಣಿ ಹೆಚ್.ವಿ.)**
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಡೂರು.

ದಿನಾಂಕಃ 09.09.2022

**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ,**
ಕಡೂರು.
ಸಿ.ಸಿ.779/2022

ಆರೋಪಿ ಸಂಖ್ಯೆ ಃ1
ಆಪಾದಿತರ ಹೆಸರು ಃ ತಮ್ಮಯ್ಯ
ತಂದೆಯ ಹೆಸರು ಃ ಕೃಷ್ಣಪ್ಪ
ವಯಸ್ಸು ಃ 35 ವರ್ಷ
ಉದ್ಯೋಗ ಃ ವ್ಯವಸಾಯ
ವಾಸಸ್ಥಳ ಃ ಗೌಳಿಹಳ್ಳಿ ಗ್ರಾಮ, ಬೀರೂರು ಹೋಬಳಿ, ಕಡೂರು ತಾಲ್ಲೂಕು

**ದಂಡ ಪ್ರಕ್ರಿಯಾ ಸಂಹಿತೆ ಕಲಂ 240(2) ಅಡಿ ಪ್ರಕಾರ ಆರೋಪಿಯ ಹೇಳಿಕೆಃ**

ಪ್ರಃ 1) ನಿಮಗೆ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃ

ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆ?

ಉಃ

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕ ರಂದು ದಾಖಲಿಸಿಕೊಂಡಿದ್ದು, ಆರೋಪಿಯು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿರುತ್ತೇನೆಂದು ಈ ಮೂಲಕ ಧೃಡೀಕರಿಸುತ್ತೇನೆ.

3 ನೇ ಹೆಚ್ಚುವರಿ ಪ್ರಃದಃನ್ಯಾಃದಂಃಕಡೂರು.

**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ,**
ಕಡೂರು.
ಸಿ.ಸಿ.779/2022

ಆರೋಪಿ ಸಂಖ್ಯೆ ಃ2
ಆಪಾದಿತರ ಹೆಸರು ಃ ರವಿ
ತಂದೆಯ ಹೆಸರು ಃ ಕೃಷ್ಣಪ್ಪ
ವಯಸ್ಸು ಃ 40 ವರ್ಷ
ಉದ್ಯೋಗ ಃ ವ್ಯವಸಾಯ
ವಾಸಸ್ಥಳ ಃ ಗೌಳಿಹಳ್ಳಿ ಗ್ರಾಮ, ಬೀರೂರು ಹೋಬಳಿ, ಕಡೂರು ತಾಲ್ಲೂಕು

**ದಂಡ ಪ್ರಕ್ರಿಯಾ ಸಂಹಿತೆ ಕಲಂ 240(2) ಅಡಿ ಪ್ರಕಾರ ಆರೋಪಿಯ ಹೇಳಿಕೆಃ**

ಪ್ರಃ 1) ನಿಮಗೆ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃ

ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆ?

ಉಃ

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕ ರಂದು ದಾಖಲಿಸಿಕೊಂಡಿದ್ದು, ಆರೋಪಿಯು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿರುತ್ತೇನೆಂದು ಈ ಮೂಲಕ ಧೃಡೀಕರಿಸುತ್ತೇನೆ.

3 ನೇ ಹೆಚ್ಚುವರಿ ಪ್ರಃದಃನ್ಯಾಃದಂಃಕಡೂರು.

**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ,**
ಕಡೂರು.
ಸಿ.ಸಿ.779/2022

ಆರೋಪಿ ಸಂಖ್ಯೆ ಃ3
ಆಪಾದಿತರ ಹೆಸರು ಃ ಚೈತ್ರ
ಗಂಡನ ಹೆಸರು ಃ ತಮ್ಮಯ್ಯ
ವಯಸ್ಸು ಃ 28 ವರ್ಷ
ಉದ್ಯೋಗ ಃ ಮನೆಕೆಲಸ
ವಾಸಸ್ಥಳ ಃ ಗಾಳಿಹಳ್ಳಿ ಗ್ರಾಮ, ಬೀರೂರು ಹೋಬಳಿ, ಕಡೂರು ತಾಲ್ಲೂಕು

ದಂಡ ಪ್ರಕ್ರಿಯಾ ಸಂಹಿತೆ ಕಲಂ **240(2)** ಅಡಿ ಪ್ರಕಾರ ಆರೋಪಿಯ ಹೇಳಿಕೆಃ

ಪ್ರಃ 1) ನಿಮಗೆ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃ

ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆ?

ಉಃ

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕ ರಂದು ದಾಖಲಿಸಿಕೊಂಡಿದ್ದು, ಆರೋಪಿಯು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿರುತ್ತೇನೆಂದು ಈ ಮೂಲಕ ಧೃಡೀಕರಿಸುತ್ತೇನೆ.

3 ನೇ ಹೆಚ್ಚುವರಿ ಪ್ರಃದಃನ್ಯಾಃದಂಃಕಡೂರು.

**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ,**
ಕಡೂರು.
ಸಿ.ಸಿ.779/2022

ಆರೋಪಿ ಸಂಖ್ಯೆ ಃ4
ಆಪಾದಿತರ ಹೆಸರು ಃ ಅನಿತಾ
ಗಂಡನ ಹೆಸರು ಃ ರವಿ
ವಯಸ್ಸು ಃ 30 ವರ್ಷ
ಉದ್ಯೋಗ ಃ ಮನೆಕೆಲಸ
ವಾಸಸ್ಥಳ ಃ ಗಾಳಿಹಳ್ಳಿ ಗ್ರಾಮ, ಬೀರೂರು ಹೋಬಳಿ, ಕಡೂರು ತಾಲ್ಲೂಕು

ದಂಡ ಪ್ರಕ್ರಿಯಾ ಸಂಹಿತೆ ಕಲಂ **240(2)** ಅಡಿ ಪ್ರಕಾರ ಆರೋಪಿಯ ಹೇಳಿಕೆಃ

ಪ್ರಃ 1) ನಿಮಗೆ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃ

ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆ?

ಉಃ

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕ ರಂದು ದಾಖಲಿಸಿಕೊಂಡಿದ್ದು, ಆರೋಪಿಯು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿರುತ್ತೇನೆಂದು ಈ ಮೂಲಕ ಧೃಡೀಕರಿಸುತ್ತೇನೆ.

3 ನೇ ಹೆಚ್ಚುವರಿ ಪ್ರಃದಃನ್ಯಾಃದಂಃಕಡೂರು.